# ಕುವೆಂಪುರವರ ಜಲಗಾರ ನಾಟಕ

**ತೇಜಾವತಿ ಕೆ.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಕುವೆಂಪು ಮಹಾವಿದ್ಯಾಲಯ ಪ್ರಥಮ ದರ್ಜೆ ಕಾಲೇಜು, ಕೆಂಗಲ್, ಚನ್ನಪಟ್ಟಣ.

**Received:15/12/2024 ; Accepted: 10/01/2025 ; Published: 02/02/2025**

**DOI: https://doi.org/10.5281/zenodo.14788756**

## ABSTRACT:

ರಾಷ್ಟ್ರಕವಿ ಕುವೆಂಪುರವರು ಕನ್ನಡದ ಮೇರು ಕವಿ, ಅಗ್ರಮಾನ್ಯ ಕವಿ, ಕಾದಂಬರಿಕಾರ, ವಿಮರ್ಶಕ, ಉತ್ತಮ ಚಿಂತಕರೂ ಆಗಿದ್ದರು. ಇವರು ಅನೇಕ ನಾಟಕಗಳನ್ನು ಬರೆದಿದ್ದಾರೆ. 20ನೇಯ ಶತಮಾನದ ಶ್ರೇಷ್ಠಕವಿ, ವರಕವಿ ಬೇಂದ್ರೆಯವರಿಂದ ''ಯುಗದಕವಿ ಜಗದಕವಿ'' ಎನಿಸಿಕೊಂಡವರು. ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ಸಾರಿದವರು ಕುವೆಂಪುರವರು.

ಜಲಗಾರ ನಾಟಕ ಆರಂಭಗೊಳ್ಳುವುದು ಆಗಷ್ಟೇ ಸೂರ್ಯ ಮೂಡುವ ಹೊತ್ತಿನಲ್ಲಿ ಇನ್ನೂ ರಂಗದ ಮೇಲೆಲ್ಲಾ ಮಬ್ಬು ಮಬ್ಬು ಕತ್ತಲು, ''ಮೂಡಿ ಬಾ, ಮೂಡಿ ಬಾ, ಜಗದ ಕಣ್ಣೆ ಬಾ, ಬಾ'' ಎಂದು ಬೆಳಗನ್ನು ಸ್ವಾಗತಿಸುವ ಹಾಡಿನ ಮೂಲಕ ನಾಟಕ ಆರಂಭಗೊಳ್ಳುತ್ತದೆ. ಜಲಗಾರ ನಾಟಕದಲ್ಲಿ ಇರುವುದು ಎರಡು ದೃಶ್ಯಗಳು. ಮೊದಲನೆಯದು ''ದೇವಸ್ಥಾನಕ್ಕೆ ಜನರು ಹೋಗುತ್ತಿರುವುದು'' ಎರಡನೆಯದು ''ದೇವಸ್ಥಾನದಿಂದ ಹಿಂತಿರುಗುತ್ತಿರುವುದು''. ಜಲಗಾರ ಕಸಗುಡಿಸುವ ಕಾಯಕದಲ್ಲಿರುತ್ತಾನೆ. ಜನರು ಜಾತ್ರೆ, ಉತ್ಸವ ಎಂದೆಲ್ಲಾ ದೇವಸ್ಥಾನಕ್ಕೆ ಹೊರಟಿದ್ದಾರೆ. ಇಲ್ಲಿ ದೇವಸ್ಥಾನ ಉಳ್ಳವರ ಪಾಲಿಗೆ ಇರುವಂತದ್ದು, ಇಲ್ಲದವರ ಪಾಲಿಗೆ ದೇವರು ಅವರ ನಿತ್ಯದ ಕಾಯಕದಲ್ಲಿ ಕಾಣಬೇಕಾದ ಸತ್ಯ.

ಹೀಗೆ ಕುವೆಂಪುರವರು ಬರೆದ ಅನೇಕ ನಾಟಕಗಳಲ್ಲಿ ''ಜಲಗಾರ'' ನಾಟಕವು ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದಿದೆ. ಈ ನಾಟಕ ರಂಗಪ್ರದರ್ಶನವನ್ನು ಕಂಡಿದ್ದೇ ಅಲ್ಲದೆ ಅನೇಕ ಬಾರಿ ಚರ್ಚೆಗೆ, ಜಿಜ್ಞಾಸೆಗೆ ಒಳಗಾಗಿ ಓದುಗರಲ್ಲಿ ನಮ್ಮ ಸಾಮಾಜಿಕ ಸ್ಥಿತಿಗತಿಯ ಬಗ್ಗೆ ಕಾಯಕದ ಮಹತ್ವವನ್ನು ಸಾರಿದೆ.

## KEYWORDS:

ಕಾಯಕ, ಜಾತಿ, ಬಡತನ, ಮೌಢ್ಯತೆ, ಆಧುನಿಕತೆ, ದೇವರು, ರೈತ, ಉಳ್ಳವರು, ಸಮಾಜ, ಶೋಷಣೆ, ಶ್ರಮಿಕವರ್ಗ.

ನಾಡಕವಿ ಕುವೆಂಪುರವರು ಸದಾ ಮನುಕುಲದ ಒಳಿತನ್ನು ಕುರಿತೇ ಚಿಂತಿಸಿದವರು. ಪ್ರಕೃತಿಯ ಕವಿಯಾದ ಅವರು ಮನುಷ್ಯನು ತನ್ನ ಅಹಂಕಾರವನ್ನು ಕಳೆದುಕೊಂಡು ಪ್ರಕೃತಿಯಲ್ಲಿ ಒಂದಾಗಬೇಕೆಂದು ತಮ್ಮ ಕವಿತೆಗಳಲ್ಲಿ ಸಾರಿದ್ದಾರೆ. ಕುವೆಂಪುರವರ ನಾಟಕಗಳು ಸಾಮಾಜಿಕ ಪರಿಸರದಲ್ಲಿ ಮನುಷ್ಯನ ನಡವಳಿಕೆ ಹೇಗಿರಬೇಕೆಂಬುದನ್ನು ಕುರಿತಾಗಿವೆ. ಜೊತೆಗೆ ಸಮಾಜದಲ್ಲಿನ ಜಾತಿಪದ್ಧತಿ, ಸಾಮಾಜಿಕ ತಾರತಮ್ಯ, ವರ್ಗ ತಾರತಮ್ಯ, ಹಿಂಸೆ ಮೊದಲಾದವುಗಳನ್ನು ಇಲ್ಲವಾಗಿಸಿ ವಿಶ್ವಮಾನವರಾಗಿ ಬದುಕನ್ನು ರೂಪಿಸಿಕೊಳ್ಳಬೇಕೆಂದು ತಿಳಿಸುತ್ತವೆ.

ಕುವೆಂಪುರವರು ಅನೇಕ ನಾಟಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ಜಲಗಾರ' ನಾಟಕವು ರಂಗಪ್ರದರ್ಶನವನ್ನು ಕಂಡಿದ್ದೇ ಅಲ್ಲದೆ ಅನೇಕ ಬಾರಿ ಚರ್ಚೆ, ಜಿಜ್ಞಾಸೆಗೆ ಒಳಗಾಗಿ ಓದುಗರಲ್ಲಿ ನಮ್ಮ ಸಾಮಾಜಿಕ ಸ್ಥಿತಿಗತಿಯ ಜೊತೆಗೆ ಕಾಯಕದ ಮಹತ್ವನ್ನು ಸಾರುತ್ತದೆ.

"ಕುವೆಂಪುದವರ ವೈಚಾರಿಕ ಚಿಂತನೆಯು ತನ್ನ ಸ್ಪಷ್ಟತೆಯನ್ನು, ಪ್ರಖರತೆಯನ್ನು, ಸ್ಥಿರತೆಯನ್ನು ಕಂಡುಕೊಂಡಿದ್ದು ಜಲಗಾರ ನಾಟಕದಲ್ಲಿ. ಪುರೋಹಿತಶಾಹಿಯ ದಬ್ಬಾಳಿಕೆ, ಮೂಢನಂಬಿಕೆ, ಅಜ್ಞಾನ, ಅವೈಚಾರಿಕತೆಯಿಂದ ನಲುಗುತ್ತಿರುವ ಭಾರತದ ಬಹುಸಂಖ್ಯಾತ ಶೂದ್ರವರ್ಗಗಳ ದುಸ್ಥಿತಿಯನ್ನು, ಕೀಳರಿಮೆಯನ್ನು ತಮ್ಮ ಅರಿವಿನ ಮೂಲಕ ಗ್ರಹಿಸಿದ ನಾಟಕಾರರಿಗೆ ಜಲಗಾರ ನಾಟಕ ಹೊಸ ಹೊಳಹುಗಳನ್ನು, ಜಾಗೃತಿಯನ್ನು, ಪ್ರತಿರೋಧವನ್ನು ನಿರೂಪಿಸಲು ಸಶಕ್ತ ಮಾಧ್ಯಮವಾಗಿ ತೋರಿತು. ಕುವೆಂಪುರವರ ನಂತರದ ವಿವಿಧ ಸಾಹಿತ್ಯಕ ಪ್ರಕಾರಗಳಲ್ಲಿ ಪ್ರತಿಪಾದಿತವಾದ ತತ್ವ-ಚಿಂತನೆಗಳೆಲ್ಲವೂ ಈ ನಾಟಕದಲ್ಲಿ ಮೊಳಕೆಯೊಡೆದಿವೆ. ಅವರ ಸಮಗ್ರ ಸಾಹಿತ್ಯಕ್ಕೆ ಜಲಗಾರನೇ ಅಡಿಪಾಯ ಹಾಗೂ ದಿಕ್ಸೂಚಿ. ಯಶಸ್ವಿಯಾಗಿ ಆರಂಭಿಸಿದ ಕೀರ್ತಿ ಜಲಗಾರ ನಾಟಕಕ್ಕೆ ಸಲ್ಲುತ್ತದೆ".[1]

ಕುವೆಂಪುರವರು ತಮ್ಮ ನಾಟಕಗಳಿಗೆ ವಸ್ತುಗಳನ್ನು ಆಧುನಿಕತೆಗೆ ಮುಖಾಮುಖಿ ಮಾಡಲೆಂದೇ ಪುರಾಣಗಳಿಂದ ಪಡೆಯುತ್ತಾರೆ. ಅದನ್ನು ಸಮಕಾಲೀನ ವಿಚಾರಗಳಿಂದ ಪುನಃ ರೂಪಿಸುತ್ತಾರೆ. ಅವರ ಶೂದ್ರ ತಪಸ್ವಿ, ಬೆರಳ್ಗೆಕೊರಳ್, ಜಲಗಾರ ನಾಟಕಗಳ ಆಶಯ ನೂತನವಾದುದು. ಪರಿವರ್ತನ ಶೀಲವಾದುದು. ಆದರೆ ವಸ್ತು ಮತ್ತು ಸನ್ನಿವೇಶ ಪುರಾತನವಾದುದು. ಬಳಸುವ ಭಾಷೆಯೂ ನಡುಗನ್ನಡ, ಹಳೆಯ ವಸ್ತುಗಳಲ್ಲಿ ಸಮಕಾಲೀನ ಮೌಲ್ಯಗಳನ್ನು ಶೋಧಿಸುವ, ಹೊಸದಾಗಿ ಕಟ್ಟುವ ನಿಟ್ಟಿನಲ್ಲಿ ಕುವೆಂಪುರವರ ಸೃಜನಶೀಲತೆ ಕಾರ್ಯೋನ್ಮುಖವಾಗುತ್ತದೆ.

ಕುವೆಂಪುರವರ "ಜಲಗಾರ" ನಾಟಕವು ಕಾಯಕದ ಮಹತ್ವವನ್ನು ಸಾರುತ್ತಲೇ

ನಮ್ಮ ಸಮಾಜದ ಜಾತೀಯತೆಯ ಕ್ರೂರ ಮುಖವನ್ನು ಪರಿಚಯಿಸಿ, ದೇವರು–ಧರ್ಮದ ಬಗೆಗಿನ ಚಿಂತನೆಯನ್ನು ಒಳಗೊಂಡಿರುವ ಸಾಮಾಜಿಕ ನಾಟಕಗಳಲ್ಲಿ ಪ್ರಮುಖವಾದುದ್ದಾಗಿದೆ.

"ಜಗದ ಜಲಗಾರ, ಊರ ತೋಟಿಯು ನೀನು, ಜಗದ ತೋಟಿಯು ನಾನು, ಬೀದಿಗುಡಿಸುವ ಬಸವನೆದೆಯಲ್ಲಿ ನಾನಿರುವೆ, ಉಳುತ್ತಿರುವ ಒಕ್ಕಲಿಗನೆಡೆಯಲ್ಲಿ ನಾನಿರುವೆ"[2]

ಶ್ರಮಿಕರು, ಕಾರ್ಮಿಕರು ದುಡಿಮೆಯಲ್ಲಿ ತೊಡಗಿರುವಾಗ ನಾನು ಅವರೊಂದಿಗಿರುವೆ. ಕುಂಟರನು, ಕುರುಡರನು, ದೀನರನು, ಅನಾಥರನು ಕೈಹಿಡಿದು ಪೊರೆಯುತ್ತಿರುವವರ ಜೊತೆಗೆ ನಾನಿರುವೆ ಎಂದು ದೇವರು ನುಡಿಯುತ್ತಾನೆ. ಇದು ಈ ನಾಟಕದ ಮುಖ್ಯ ತಿರುಳು. "ದೇವರು" ಎಲ್ಲಿದ್ದಾನೆ ಎಂಬ ಪ್ರಶ್ನೆಗೆ ಕುವೆಂಪು ದೇವರನ್ನು ಪ್ರಕೃತಿಯಲ್ಲಿ ಕಂಡು ಹಾಡಿ ಹೊಗಳಿ ಕವಿತೆಗಳನ್ನು ಬರೆದವರು. ಈ ಜಲಗಾರ ನಾಟಕದಲ್ಲಿ ದೇವರನ್ನು ಶ್ರಮಿಕರ ಶ್ರಮದಲ್ಲಿ ಕಾಣುತ್ತಾರೆ. ಹಾಗೆಯೇ ಕಸಗುಡಿಸುವವನನ್ನು "ಜಲಗಾರ" ಎಂದು ಕರೆದು, ದುಡಿಮೆಗೆ ಮೇಲು–ಕೀಳು ಭೇದವಿಲ್ಲವೆಂದು ಕಾಯಕದ ಘನತೆಯನ್ನು ಎತ್ತಿ ಹಿಡಿದು ಜಲಗಾರನನ್ನು ನಾಟಕದ ಪ್ರಧಾನ ಪಾತ್ರವಾಗಿಸಿದ್ದಾರೆ.

ಜಲಗಾರ ನಾಟಕ ಆರಂಭಗೊಳ್ಳುವುದು ಆಗಷ್ಟೇ ಸೂರ್ಯ ಮೂಡುವ ಹೊತ್ತಿನಲ್ಲಿ, ಇನ್ನೂ ರಂಗದ ಮೇಲೆಲ್ಲಾ ಮಬ್ಬು ಮಬ್ಬು ಕತ್ತಲು, " ಮೂಡಿ ಬಾ, ಮೂಡಿ ಬಾ, ಜಗದ ಕಣ್ಣೆ ಬಾ, ಬಾ" ಎಂದು ಬೆಳಗನ್ನು ಸ್ವಾಗತಿಸುವ ಹಾಡಿನ ಮೂಲಕ ನಾಟಕ ಆರಂಭಗೊಳ್ಳುತ್ತದೆ. ಜಲಗಾರ ನಾಟಕದಲ್ಲಿ ಇರುವುದು ಎರಡು ದೃಶ್ಯಗಳು. ಮೊದಲನೆಯದು "ದೇವಸ್ಥಾನಕ್ಕೆ ಜನರು ಹೋಗುತ್ತಿರುವುದು" ಎರಡನೆಯದು "ದೇವಸ್ಥಾನದಿಂದ ಹಿಂತಿರುಗುತ್ತಿರುವುದು". ಜಲಗಾರ ಕಸಗುಡಿಸುವ ಕಾಯಕದಲ್ಲಿರುತ್ತಾನೆ. ಜನರು ಜಾತ್ರೆ, ಉತ್ಸವ ಎಂದೆಲ್ಲಾ ದೇವಸ್ಥಾನಕ್ಕೆ ಹೊರಟಿದ್ದಾರೆ. ಇಲ್ಲಿ ದೇವಸ್ಥಾನ ಉಳ್ಳವರ ಪಾಲಿಗೆ ಇರುವಂತದ್ದು, ಇಲ್ಲದವರ ಪಾಲಿಗೆ ದೇವರು ಅವರ ನಿತ್ಯದ ಕಾಯಕದಲ್ಲಿ ಕಾಣಬೇಕಾದ ಸತ್ಯ.

ಊರಬೀದಿ ಗುಡಿಸುವುದರಲ್ಲೇ ದೇವರನ್ನು ಕಾಣುವ ಜಲಗಾರನು ಗುಡಿಗೆ ಹೊರಟಿರುವ ರೈತನನ್ನು ಕೇಳುತ್ತಾನೆ. "ಶಿವನ ಕಾಣಲು ನೀನು ಗುಡಿಗೆ ಹೋಗುವೆಯೇನು? ನಿನ್ನ ನೇಗಿಲ ಗೆರೆಯ ದಿವ್ಯದೇವಾಲಯದಿ ಶಿವನ ಕಾಣೆಯ ನೀನು? ಉಳುವಾಗ, ನೆಡುವಾಗ ಪೂಜೆ ಮಾಡುವೆ ನೀನು, ಕರ್ಮವೇ ನಿನ್ನ ಯೋಗವಲ್ಲವೇನು?"[3] ಎಂದು ತಾನು ನೇಗಿಲಯೋಗಿ ಎಂದು ಹಾಡುವ ರೈತ, ಬಾಯಲ್ಲಿ ಕಾಯಕವೇ ಪೂಜೆ ಎನ್ನುತ್ತಿದ್ದರೂ ಶಿವನ ಪೂಜೆಗಾಗಿ ದೇವಾಲಯಕ್ಕೆ

ಹೊರಡುವ ಸಂಗತಿಯು ಅಚ್ಚರಿಯನ್ನುಂಟು ಮಾಡುತ್ತದೆ.

ಬೀದಿ ಗುಡಿಸುವ ಕೆಲಸದಲ್ಲಿ ತೊಡಗಿರುವ ಜಲಗಾರನು ಶಿವನ ಗುಡಿಗೆ ಜಾತ್ರೆಗೆ ತೆರಳುವ ಮತ್ತು ಹಿಂತಿರುಗುವ ರೈತ, ಯುವಕ, ಪಾರ್ವರು, ಭಟ್ಟ, ತಿರುಕ, ತರುಣರು, ಬಾಲಕರು, ಯುವತಿಯನ್ನು ಬೀದಿಯಲ್ಲಿ ಕಂಡು ಅವರೊಂದಿಗೆ ಮಾತುಕತೆ ಆಡುತ್ತಾನೆ. ಇವರೆಲ್ಲರಿಗೂ ದೇವರ ಅಸ್ತಿತ್ವವಿರುವುದು ಗುಡಿಯಲ್ಲಿ ಕಾಯಕದಲ್ಲಿ, ನಮ್ಮ ಮಾನವೀಯ ಗುಣದಲ್ಲಿ, ಪ್ರೀತಿ–ವಿಶ್ವಾಸ, ಸಹಾಯ–ಸಹಕಾರ ಮನೋಭಾವದಲ್ಲಿ ಎಂಬುದನ್ನು ತನ್ನ ಮಾತಿನಿಂದಲ್ಲ. ನಾಟಕದ ಉದ್ದಕ್ಕೂ ಜಲಗಾರ ತನ್ನ ನಡವಳಿಕೆಯಿಂದಲೇ ತಿಳಿಸುತ್ತಾನೆ.

ನಾಟಕದಲ್ಲಿ ಇಬ್ಬರು ಯುವಕರು ಬರುತ್ತಾರೆ. ಅವರು ತಮ್ಮ ಮಾತುಕತೆಯಲ್ಲಿ "ಮೊದಲ ಠಕ್ಕನು ಮೊದಲ ಬೆಪ್ಪನನ್ನು ಸಂಧಿಸಲು ಸಂಭವಿಸಿತು. ಈ ಮತ ಎಂಬ ಮತಿವಿಕಾಸ, ದೊರೆ ಮತ್ತು ಪುರೋಹಿತ ಇವರಿಬ್ಬರೂ ಮೊಲೆಯೂಡಿ ಸಲಹಿದರು ಇದನ್ನು. ಮತದ ಮದಿರೆಯ ಕುಡಿದು ಮಂಕು ಬಡಿದಿದೆ ಜನಕೆ"[4] ಎನ್ನುತ್ತಾರೆ. ಅವರ ಮಾತಿನಲ್ಲಿ ಅವರು ವಿಚಾರವಂತರಂತೆ ಕಾಣುತ್ತಾರೆ. ಆದರೆ ಆ ಯುವಕರೇ ಕಣ್ಣು ಕಾಣದ ಭಿಕ್ಷುಕನಿಗೆ ನಿಜವಾಗಿ ಕುರುಡನಾ ಎಂದು ಪರೀಕ್ಷಿಸಲು ಅವನ ಕಣ್ಣಿಗೇ ಚುಚ್ಚಲು ಹೋಗುತ್ತಾರೆ. ಆ ಮೂಲಕ ಇಲ್ಲಿ ಕುವೆಂಪುರವರ ವಿಚಾರವಂತಿಕೆಯು ಒಣವಾದವಾಗಿದೆ. ಮಾನವೀಯ ಮೌಲ್ಯವನ್ನು ಕಳೆದುಕೊಳ್ಳುವ ದುರಂತವನ್ನು ಚೆನ್ನಾಗಿ ಕಾಣಿಸಿದ್ದಾರೆ.

ಈ ನಾಟಕದಲ್ಲಿ ನಮ್ಮ ಗಮನ ಸೆಳೆಯುವ ಅಂಶವೆಂದರೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಜಲಗಾರನ ಪಾತ್ರದ ಮೂಲಕ ಸಮಾಜದಲ್ಲಿ ಉನ್ನತ ಶ್ರೇಣಿ ಎನಿಸಿದ ವರ್ಗಗಳ ಕಣ್ತೆರೆಸುವ, ಕಾಯಕದ ಮೂಲಕ, ಶ್ರಮಸಂಸ್ಕೃತಿ ಮೂಲಕ ಸ್ಥಾವರಗೊಂಡ ದೇವರ ಕಲ್ಪನೆಯನ್ನು ಮುರಿದು ಜಂಗಮಗೊಳಿಸುವ ಕ್ರಿಯೆ, ಹೌದು ದೇವರಿದ್ದಾನೆ. ಅವನು ಪ್ರತಿಯೊಬ್ಬರ ಕಾಯಕದಲ್ಲಿ ಅದರಲ್ಲಿರುವ ಶ್ರದ್ಧೆಯಲ್ಲಿ ಮತ್ತು ಯಾರು ಇತರರಿಗಾಗಿ ಮಿಡಿಯುತ್ತಾರೋ ಅವರೊಟ್ಟಿಗೆ ದೇವರು ಇದ್ದಾನೆಂದು ಕುವೆಂಪು ಈ ನಾಟಕದಲ್ಲಿ ಬಲವಾಗಿ ಮಂಡಿಸಿದ್ದಾರೆ.

ಜಲಗಾರ ಕೆಳಜಾತಿಗೆ ಸೇರಿದವನು. ಸಮಾಜ ಅವನನ್ನು ಶಿವನ ಗುಡಿಗೆ ಪ್ರವೇಶಿಸಲು ಬಿಡುವುದಿಲ್ಲ. ನಿಷೇಧ ಹೇರಿದೆ. ಆ ಜಲಗಾರನೋ ನಿಮ್ಮ ಗುಡಿ ನಿಮಗಿರಲಿ, ಅದರಲ್ಲಿರುವ ನಿಮ್ಮ ಶಿವ ನಿಮಗಿರಲಿ, ನನ್ನ ಗುಡಿ ಈ ಜಗತ್ತು, ನನ್ನ ಪೊರಕೆಯೇ ಆರತಿ, ನಿಷ್ಠೆಯಿಂದ ಕಸ ಗುಡಿಸುವುದೇ ದೇವರ ಪೂಜೆ "ಶಿವನ ಗುಡಿಯ ಶಿವನು ಜೋಯಿಸರ ಶಿವನಂತೆ ನನ್ನ ಶಿವನು ಈ ಮಣ್ಣಿನಲ್ಲಿಹನು. ನನ್ನ ಶಿವ ಕೊಳೆತ ಕಸದೊಳಗಿಹನು"[5] ಎಂದು ನಂಬಿ ಬದುಕುತ್ತಾನೆ, ಆ ಮೂಲಕ

ಕಾಯಕದಲ್ಲಿ ದೇವರನ್ನು ಕಾಣುತ್ತಾ, ದುಡಿದರಷ್ಟೇ ದೇವನಾದರೂ ಒಲಿದಾನೆಂಬ ವಿಚಾರವನ್ನು ಜಗತ್ತಿಗೆ ಸಾರುತ್ತಾನೆ. ಹೀಗೆ ಕುವೆಂಪುರವರ ವಿಚಾರಗಳು ಧಾರ್ಮಿಕ, ಆಧ್ಯಾತ್ಮಿಕತೆಯನ್ನು ಮೀರಿ ಸಾಮಾಜಿಕ ಮೌಲ್ಯವನ್ನು ಪಡೆಯುತ್ತವೆ.

ಜನಮಾನಸದಲ್ಲಿರುವ ಕಥೆ, ಪಾತ್ರ, ಸನ್ನಿವೇಶಗಳ ಮೂಲಕ ಸರ್ವಕಾಲಿಕ ಸತ್ಯವನ್ನು ಹೇಳಿದರೆ ಅದು ಜನಸನ್ನಿತವಾಗುತ್ತದೆ ಎನ್ನುವ ಕುವೆಂಪುರವರ ನಿಲುವು ಅಭೂತ ಪೂರ್ಣವಾದುದು. ಆದರೆ ಇಲ್ಲಿ ಎಚ್ಚರ ತಪ್ಪಿದರೆ ಅದು ಉಗ್ರಸ್ವರೂಪವನ್ನು ಪಡೆದುಕೊಳ್ಳುತ್ತದೆ. ಈ ನಿಟ್ಟಿನಲ್ಲಿ ಕುವೆಂಪುರವರು ಅತ್ಯಂತ ಎಚ್ಚರಿಕೆಯಿಂದ ಜವಾಬ್ದಾರಿಯುತ ನಡೆಯನ್ನು ಅನುಸರಿಸಿದ್ದಾರೆ. ಇಲ್ಲಿ ಕುವೆಂಪು ಯಾವುದನ್ನು ನೇರ ಅಲ್ಲಗಳೆಯುವುದಿಲ್ಲ. ಯಾವುದನ್ನೂ ಶ್ರೇಷ್ಠ ಎಂದು ಉನ್ನತೀಕರಿಸುವುದಿಲ್ಲ. ಇಲ್ಲಿ ಯಾರೂ ಮುಖ್ಯರಲ್ಲ. ಯಾರೂ ಅಮುಖ್ಯರಲ್ಲ. ಯಾವುದು ಯಃಕಶ್ಚಿತವಲ್ಲ ಎಂಬ ನಿಲುವನ್ನು ಸಾದರ ಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕುವೆಂಪು ನಮಗೆ ಸಾಹಿತ್ಯದ ಜಲಗಾರನಂತೆ ಕಾಣಿಸಿಗುತ್ತಾರೆ. "ಜಲಗಾರ ಎನ್ನುವ ಪದಕ್ಕೆ ಪಂಡಿತ ಕವಾಲಿಯವರು ಸಂಪಾದಿಸಿರುವ:ಕಸ್ತೂರಿ ಕೋಶ"ದಲ್ಲಿ ಧೂಳು–ಬೂದಿಗಳಿಂದ ಬಂಗಾರವನ್ನು ತೆಗೆಯುವವ ಎಂಬುದಾಗಿ ಇದೆ. ಇದರಂತೆ ಕುವೆಂಪು ತಮ್ಮ ಪುರಾಣಗಳಲ್ಲಿ ಇರುವ ಧೂಳನ್ನು ತೆಗೆಯುವ ಮುಖೇನ ಬಂಗಾರವು ಹೊರಸೂಸುವಂತೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ಸಾಹಿತ್ಯದ ಜಲಗಾರ, ಈ ಹೇಳಿಕೆಯನ್ನು ಅವರ ಜಲಗಾರ ಹಾಗೂ ಶೂದ್ರ ತಪಸ್ವಿ ನಾಟಕಗಳು ಸಮರ್ಥಿಸುತ್ತವೆ".[6]

ಜಲಗಾರ ನಾಟಕದಲ್ಲಿ ಬರುವ ಒಂದೊಂದು ಪಾತ್ರವೂ ನಮ್ಮ ಅರಿವನ್ನು ವಿಸ್ತರಿಸಲೆಂದೇ ಬಂದಂತಿವೆ. ನಮ್ಮೊಳಗಿನ ಮೌಢ್ಯವನ್ನು ಕಳೆಯಲೆಂದೇ ರೂಪು ತಳೆದಂತಿವೆ. ಇಲ್ಲಿ ಬರುವ ತಿರುಕನ (ಭಿಕ್ಷುಕ) ಪಾತ್ರದ ಮೂಲಕ ನಮ್ಮಲ್ಲಿ ಕಳೆದು ಹೋಗುತ್ತಿರುವ ಮಾನವೀಯತೆಯನ್ನು ಮತ್ತು ಅಕ್ಷರಸ್ಥರಾದ ಯುವಕರ ಅಹಂಕಾರವನ್ನು ಒಟ್ಟಿಗೆ ತಿಳಿಸುತ್ತದೆ. ಯುವಕರು ಬೇಜವಾಬ್ದಾರಿತನದಿಂದ ತಿರುಕನನ್ನು ಕಣ್ಣಿದೆಯೋ ಇಲ್ಲವೋ ಅವನಿಗೆ ಎಂದು ಪರೀಕ್ಷಿಸಲು ಅವನ ಕಣ್ಣಿಗೆ ಚುಚ್ಚಲು ಹೋಗುತ್ತಾರೆ. ಅದನ್ನು ತಡೆಯಲು ಬಂದ ಜಲಗಾರರನನ್ನು ಒದ್ದು ನೂಕಿ ಬಿಡುತ್ತಾರೆ. ಆಗ ಜಲಗಾರ ತಿರುಕನನ್ನು ಮೇಲೆತ್ತಿ "ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ?" ಎಂದು ಹೇಳುವ ಮಾತು ಇಂದಿನ ಸಮಾಜದ ಚಿತ್ರಣವನ್ನು ಸೂಚಿಸುತ್ತದೆ.

ಜಲಗಾರ ನಾಟಕದ ಕೊನೆಭಾಗದಲ್ಲಿ ಜಲಗಾರನಿಗೆ ಶಿವ ಪ್ರತ್ಯಕ್ಷನಾಗಿ "ನಾನೊಬ್ಬ ಜಲಗಾರ, ಅಂಜದಿರು ಸಹೋದರನೆ! ಜಗದ ಜಲಗಾರ ನಾನು!

ಶಿವನೆಂದು ಕರೆಯುವರು ಎನ್ನ''[7] ಎಂದು ಹೇಳುತ್ತಾನೆ. ನಿನ್ನನ್ನು ನಾನು ಶಿವನೆಂದು ನಂಬುವುದು ಹೇಗೆ? ನಾನು ನಿನ್ನ ರೂಪವನ್ನು ನೋಡಿಲ್ಲ. ಪಂಡಿತರು ಬೇರೋಂದು ರೀತಿಯಲ್ಲಿ ನಿನ್ನ ಬಣ್ಣಿಸುವರು ಎಂದು ಜಲಗಾರ ಪ್ರಶ್ನಿಸುತ್ತಾನೆ. ಜಲಗಾರನ ಮಾತಿಗೆ ಉತ್ತರಿಸುತ್ತಾ ಶಿವನು ''ಪಂಡಿತರ ಸುಳ್ಳು ಬಣ್ಣನೆಯನ್ನು ನಂಬದಿರು, ಅದು ಕುರುಡನು ಬಣ್ಣಿಸುವ ತೆರದಲ್ಲಿ ಇದೆ,. ನನ್ನ ನಿಜರೂಪವನ್ನು ನೋಡಲೂ ಹೇಸುವ ಅವರು ಚಂದಿರನನ್ನು ಮುಡಿಸಿ, ಜಡೆಯಲ್ಲಿ ಗಂಗೆಯನಿಟ್ಟು, ಕೊರಳಲ್ಲಿ ಹಾವು ಸುತ್ತಿ, ಹಣೆಯಲ್ಲಿ ಉರಿಗಣ್ಣನುಳ್ಳ ಮುಕ್ಕಣ್ಣನನ್ನಾಗಿ ಮಾಡಿರುವರು. ನನ್ನ ನಿಜರೂಪದಿಂದ ಕರ್ಮದಲ್ಲಿ ಪೂಜಿಸುತ್ತಿರುವವನು ನೀನೊಬ್ಬನೇ. ನಾನು ಶಾಸ್ತ್ರಿಗಳು ರೂಪಿಸಿರುವ ಶಿವನಲ್ಲ. ಜಲಗಾರ ಶಿವನು ನಾನು, ಶಿವಗುಡಿಯ ಪೀಠದಲ್ಲಿ ಎಂದೆಂದಿಗೂ ನಾನಿಲ್ಲ, ನಾನಿರುವುದು ಬೀದಿ ಗುಡಿಸುವ ಬಡವನೆದೆಯಲ್ಲಿ, ಉಳುತ್ತಿರುವ ಒಕ್ಕಲಿಗರ ನೆಡೆಯಲ್ಲಿ ಕುಂಟರು, ಕುರುಡರನು, ದೀನರನು, ಅನಾಥರನು ಕೈ ಹಿಡಿದು ಪೊರೆಯುವವರ ಎದೆಯಲ್ಲಿ ನಾನಿರುವೆ. ಆ ನನ್ನ ಭಕ್ತರಿಗೆ ನನ್ನ ನಿಜರೂಪದಿಂದ ಕಾಣಿಸಿಕೊಂಡು ಸಲಹುತ್ತಿರುವೆ. ನೀನ್ನೆನ್ನ ನಿಜಭಕ್ತನಾಗಿರುವೆ. ಅದಕ್ಕಾಗಿ ಕಲ್ಪನೆಯ ರೂಪವನ್ನು ತೆಗೆದೊಗೆದು ಬಂದಿಹೆನು ನೋಡಿಲ್ಲಿ'' ಎಂದು ಪ್ರತ್ಯಕ್ಷನಾದ ಶಿವನ ಮಾತುಗಳಲ್ಲಿ ಕಾಯಕದಲ್ಲಿ ನಿಷ್ಠೆ ಹೊಂದಿರುವವರ ಬಳಿ ದೇವರು ಇರುತ್ತಾನೆಂದು. ಪುರೋಹಿತ ಶಾಹಿ ವರ್ಗದವರು ಜನರಲ್ಲಿ ದೇವರನ್ನು ಕುರಿತು ಹುಟ್ಟು ಹಾಕಿರುವ ಭ್ರಮೆಗಳನ್ನು ತಿಳಿಸುವ ಪ್ರಯತ್ನಗಳನ್ನು ಕಾಣಬಹುದು. ಜಲಗಾರ ಮತ್ತು ಶಿವನ ಮುಖಾಮುಖಿ ಮತ್ತು ಅವರ ಸಂಭಾಷಣೆಯ ಮೂಲಕ ಕುವೆಂಪು ದೇವರ ಅಸ್ತಿತ್ವ ಕುರಿತ ಅನೇಕ ಮಹತ್ವದ ವಿಚಾರಗಳನ್ನು ತಿಳಿಸಿದ್ದಾರೆ. ಹಾಗೆಯೇ ಕಾಯಕದ ಘನತೆಯನ್ನು ಎತ್ತಿ ಹಿಡಿದಿದ್ದಾರೆ.

ಕುವೆಂಪು ನಾಟಕಗಳ ಬಗ್ಗೆ ಚರ್ಚಿಸುತ್ತಾ ಕೆ.ಮರುಳಸಿದ್ದಪ್ಪ ಅವರು ''ವೈದಿಕ ಧರ್ಮದ ಕರ್ಮ ಸಿದ್ಧಾಂತ, ಭಾರತದ ಧಾರ್ಮಿಕ ನವೋದಯಕ್ಕೆ ಕಾರಣ ಪುರುಷರಾದ ರಾಮಕೃಷ್ಣ, ವಿವೇಕಾನಂದ ವಿಚಾರಗಳು, ಗಾಂಧಿವಾದ ಇವೆಲ್ಲಾ ಕುವೆಂಪು ನಾಟಕಗಳ ತಾತ್ವಿಕತೆಯನ್ನು ಪ್ರಭಾವಿಸಿರುವ ಅಂಶಗಳು. ಕುವೆಂಪುರವರು ವಿವೇಕಾನಂದ, ಮಹಾತ್ಮ ಗಾಂಧೀಜಿಯವರಂತೆ ಹಿಂದೂ ಧರ್ಮದ ಕೆಲವು ಮೂಢನಂಬಿಕೆಗಳನ್ನು ಆಚರಣೆಗಳನ್ನು ಸುಧಾರಿಸ ಬಯಸುವವರೇ ಹೊರತು ಅದರ ಮೂಲಭೂತ ಸ್ವರೂಪವನ್ನು ಬದಲಾಯಿಸಲು ಅಥವಾ ಸಂಪೂರ್ಣ ತಿರಸ್ಕರಿಸಿ ಹೊಸ ಸಂಸ್ಕೃತಿಯನ್ನು ಸೃಷ್ಟಿಸಲು ಬೆಂಬಲಿಸುವುದಿಲ್ಲ. ಈ ಧಾರ್ಮಿಕ ಒಲವಿನಿಂದಾಗಿ ಅವರ ನಾಟಕಗಳಲ್ಲಿ ದೈವದ ಅಂತಿಮ ನ್ಯಾಯವನ್ನು ಕುರಿತು ದೃಢವಾದ ವಿಶ್ವಾಸವಿದೆ. ಪ್ರತಿಷ್ಠಿತರನ್ನು, ಪುರೋಹಿತರನ್ನು ಕುರಿತು ಆಕ್ರೋಶವಿದೆಯಾದರೂ ದೀನದಲಿತರಿಗೆ, ದುಃಖ ದರಿದ್ರದವರಿಗೆ ಆಸರೆಯಾಗಿ

ಭಗವಂತನಿದ್ದಾನೆಂಬ ಭರವಸೆಯೂ ಇದೆ"[8] ಎಂದು ಹೇಳಿದ್ದಾರೆ. ಆದರೆ ಕುವೆಂಪು ಮನುಷ್ಯನ ಅಂತಃಶಕ್ತಿಯ ಮೇಲೆ, ಆತ್ಮವಿಶ್ವಾಸದ ಮೇಲೆ ಅಪಾರ ನಂಬಿಕೆ ಇಟ್ಟವರು. ಮನುಷ್ಯನೊಳಗಿರುವ ಈ ಅಗಾಧ ಅಂತಃಸತ್ವವನ್ನು ಜಾಗೃತಗೊಳಿಸಿ, ಅವನು ಕಾಯಕದಲ್ಲಿ ತೊಡಗಿಕೊಂಡು ಕಾಯಕ ಯೋಗಿಯಾಗಿ ಬದುಕಬೇಕೆಂದು ಬಯಸುತ್ತಾರೆ. ಹಾಗಾಗಿಯೇ "ಜಲಗಾರ ನಾಟಕದಲ್ಲಿ ಕಸಗುಡಿಸುವ ಕ್ರಿಯೆ, ಗುಡಿಸುವುದು ಕೇವಲ ಒಂದು ತಾತ್ವಿಕ ದರ್ಶನವಾಗದೇ ಅದೊಂದು ಮೇಲು ಕೀಳಿಲ್ಲದ ಕಾಯಕವೂ ಆಗಿದೆ. ಹೀಗೆ ಶೋಷಣೆಗೆ ತುತ್ತಾದವರಿಗೆ ಕುವೆಂಪು ಸಾಂತ್ವಾನ ನೀಡುವುದು ದೇವರಿದ್ದಾನೆ ರಕ್ಷಿಸುತ್ತಾನೆ ಎಂದಲ್ಲ, ಬದಲಿಗೆ ಕಾರ್ಯತತ್ವದ ಮೂಲಕವೇ ನಿನ್ನ ಏಳ್ಗೆಗೆ ನೀನೆ ಶಿಲ್ಪಿ ಎಂಬ ವಿವೇಕಾನಂದರ ಮಾತಿನಂತೆ".[9]

ಜಲಗಾರ ನಾಟಕದಲ್ಲಿ ಜಲಗಾರನ ಮೂಲಕ ನನಗೇಕೆ ಶಿವಗುಡಿಯ ಯಾತ್ರೆ, ಕರ್ಮವೇ ಆರಾಧನೆ, ಸೇವೆಯೇ ಪೂಜೆ, ಪೊರಕೆಯೇ ಆರತಿ, ಗುಡಿಸುವುದೇ ನನ್ನ ದೇವರ ಪೂಜೆ ಎನ್ನುವ ಮಾತು ಮತ್ತು ಕ್ರಿಯೆಯ ಮೂಲಕ ಕುವೆಂಪುರವರು ಅಸ್ಪೃಶ್ಯರಿಗೆ ದೇವಾಲಯದ ಪ್ರವೇಶ ನಿಷೇಧ ಮಾಡಿರುವುದಕ್ಕೆ ಪರ್ಯಾಯವಾಗಿ ಪ್ರಕೃತಿಯಲ್ಲಿ ದೇವರನ್ನು ಕಾಣುವುದರ ಜೊತೆಗೆ ಕಾಯಕದಲ್ಲಿ, ಸೇವೆಯಲ್ಲಿ ಬಡವರ ಉದ್ಧಾರದಲ್ಲಿ ದೇವರನ್ನು ಕಾಣಬೇಕೆಂಬ ಪರ್ಯಾಯವನ್ನು ಕಟ್ಟಿಕೊಟ್ಟಿದ್ದಾರೆ. ಈ ವಿಚಾರವು ಕುವೆಂಪುರವರ ವ್ಯಕ್ತಿತ್ವದ ಭಾಗವಾಗಿಯೇ ಮೂಡಿದೆ. ಕುವೆಂಪು ಎಂದೂ ಧಾರ್ಮಿಕ ವ್ಯಕ್ತಿಯಾಗಿರಲಿಲ್ಲ. ಆದರೆ ಆಧ್ಯಾತ್ಮಿಕ ಒಲವನ್ನು ಉಳ್ಳವರಾಗಿದ್ದರು. ಜಲಗಾರ ನಾಟಕ ಭಾಷೆ ನಡುಗನ್ನಡದಿಂದ ಕೂಡಿದೆ. ಕಾವ್ಯಾತ್ಮಕ ಲಯದಲ್ಲಿ ನಾಟಕ ಸಂಭಾಷಣೆ ನಡೆಯುತ್ತದೆ. ಅಲ್ಲಲ್ಲಿ ಹಾಡುಗಳು ನಾಟಕ ವಸ್ತು ವಿಶೇಷತೆಯ ಸೊಬಗನ್ನು ಹೆಚ್ಚಿಸಲೆಂದೇ, ವಿಸ್ತರಿಸಲೆಂದೇ ಮೂಡಿವೆ. ನಾಟಕದ ಆರಂಭದಲ್ಲೇ ಭೂದೇವಿ ಹಾಡುತ್ತಾ ಕತ್ತಲೆಯನ್ನು ದೂರ ಸರಿಸಿ ಬೆಳಗು ಮೂಡಿ ಬಾ ಎಂದು ಜಗದ ಕಣ್ಣಿಗೆ ಅರಿವಿನ ಬೆಳಕೇ ಬಾ ಎಂದು ಹಾಡುತ್ತ ಬರುತ್ತಾಳೆ, ಬೆಳಗಿನೊಂದಿಗೆ ಕಸಗುಡಿಸುವ ಜಲಗಾರನು ರಂಗದ ಮೇಲೆ ಪ್ರತ್ಯಕ್ಷನಾಗುತ್ತಾನೆ. ಅವನು ಕಾಯಕದ ಮೂಲಕ ಅರಿವಿನ ಬೆಳಕು ಕಂಡುಕೊಂಡು ಜಗಕ್ಕೂ ಕಾಣಿಸಲೆಂದೇ ಬಂದವನಂತೆ ಕಾಣುತ್ತಾನೆ.

ಲೋಕ ನಗಬೇಕಾದರೆ ಯಾರಾದರೂ ಅಳಬೇಕೆನ್ನುವ ಜಲಗಾರ ಎಲ್ಲರೂ ನೆಮ್ಮದಿಯಿಂದಿರಬೇಕೆಂದರೆ ಯಾರಾದರೂ ಕಷ್ಟ ಪಡುತ್ತಲೇ ಇರಬೇಕೆಂಬ ಜಗದ ನಿಯತಿಯನ್ನು ಸಾರುತ್ತಾನೆ. ದೇವರ ಅಸ್ತಿತ್ವ ಕುರಿತ ಈ ನಾಟಕದ ಹಾಡಂತೂ ಎಲ್ಲ ಕಾಲಕ್ಕೂ ನಿಲ್ಲುವ, ಭಾರತದ ಜಾತ್ಯಾತೀತ ಸಮಾಜವಾದಿ ಧರ್ಮತೀತ ಮನೋಭಾವವನ್ನು ಎತ್ತಿ ಹಿಡಿಯುವ ಬಗೆಯದಾಗಿದೆ.

"ಗುಡಿಯೊಳಗಿರಲಿ ದೇವ, ಒಡೆಯನಾರೀ ಜಗವ ಕಾವ? ವಿಗ್ರಹದೊಳಿರೆ ರಾಮ, ಯಾರದೀ ಲೋಕದಾರಾಮ? ಮೂಡಣದೊಳಿಹನು ಹರಿ; ಪಡುವಲೊಳಿಹನು ಅಲ್ಲಾ! ಹೃದಯದೊಳು ನೀ ನೋಡೆ, ಸಲೆ ವಿಚಾರವ ಮಾಡ, ಅಲ್ಲಿರುವನು ಕರೀಮ; ಅಲ್ಲೆ ತೋರ್ಪನು ರಾಮ! ಜಗವ ಮನುಜರಿಗೆಲ್ಲಾ"[10] ಹೀಗೆಂದು ಸರ್ವಧರ್ಮದ ಸಾಕ್ಷಾತ್ಕಾರವು ನಿನ್ನ ಹೃದಯದಲ್ಲೇ ಗುಡಿ; ಮಂದಿರ, ಮಸೀದಿಯಲ್ಲಿ ಅಲ್ಲವೆಂದು ಈ ನಾಟಕದ ಮೂಲಕ ಕುವೆಂಪುರವರು ಸೊಗಸಾಗಿ ಚಿತ್ರಿಸಿದ್ದಾರೆ.

ಹೀಗೆ ಜಲಗಾರ ನಾಟಕ ಆಧುನಿಕ ಕನ್ನಡ ನಾಟಕ ಕ್ಷೇತ್ರದಲ್ಲಿ ಕಡಿಮೆ ದೃಶ್ಯಗಳಿರುವ ಕ್ರಿಯೆಯನ್ನು ವಸ್ತುವಾಗುಳ್ಳ ದೇವರು, ಧರ್ಮ, ಕಾಯಕ, ಜಾತಿ, ಬಡತನ, ಮೌಢ್ಯ ಮೊದಲಾದ ವಿಚಾರಗಳಲ್ಲಿ ಅರಿವು ಮೂಡಿಸುವ ಮುಖ್ಯವಾಗಿ ಕಾಯಕದ ಮಹತ್ವ ಸಾರುವ ಪ್ರಮುಖ ನಾಟಕವಾಗಿದೆ. ಕಾಯಕದಿಂದಷ್ಟೇ ಮೋಕ್ಷವೆಂಬ ಅರಿವು ಮೂಡಿಸುತ್ತದೆ.

**ಅಡಿ ಟಿಪ್ಪಣಿಗಳು:**

1. ರವಿಶಂಕರ ಎ.ಕೆ. & ಅನಿತ ಕೆ.ವಿ. (ಸಂ), (2019), ಬೇರು ತೇರು, ಸಾಧನ ಕೇರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಬೆಂಗಳೂರು, ಪು.ಸಂ. 2
2. ಶಿವಾರೆಡ್ಡಿ ಕೆ.ಸಿ. (ಸಂ), (2004), ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 29
3. ಶಿವಾರೆಡ್ಡಿ ಕೆ.ಸಿ. (ಸಂ), (2004), ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 08
4. ಶಿವಾರೆಡ್ಡಿ ಕೆ.ಸಿ. (ಸಂ), (2004), ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 13
5. ಶಿವಾರೆಡ್ಡಿ ಕೆ.ಸಿ. (ಸಂ), (2004), ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 08
6. ರವಿಶಂಕರ ಎ.ಕೆ. & ಅನಿತ ಕೆ.ವಿ. (ಸಂ), (2019), ಬೇರು ತೇರು, ಸಾಧನ ಕೇರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಬೆಂಗಳೂರು, ಪು.ಸಂ. 159
7. ಶಿವಾರೆಡ್ಡಿ ಕೆ.ಸಿ. (ಸಂ), (2004), ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 28
8. ಚಕ್ಕರೆ ಶಿವಶಂಕರ್ (ಸಂ), (2004), ಸಹ್ಯಾದ್ರಿಯ ಸೂರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ. 158
9. ಸುಜಾತ ಲಕ್ಷ್ಮಿಪುರ, (2021), ವಿಚಾರವಾದಿ ಕುವೆಂಪು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ಪು.ಸಂ. 18

10. ಶಿವಾರೆಡ್ಡಿ ಕೆ.ಸಿ. (ಸಂ), (2004), ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 9

## ಪರಾಮರ್ಶನ ಕೃತಿಗಳು:

1. ಶಿವಾರೆಡ್ಡಿ ಕೆ.ಸಿ. (ಸಂ), (2004), ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ರವಿಶಂಕರ ಎ.ಕೆ. & ಅನಿತ ಕೆ.ವಿ. (ಸಂ), (2019), ಬೇರು ತೇರು, ಸಾಧನ ಕೇರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಬೆಂಗಳೂರು.
3. ಸುಜಾತ ಲಕ್ಷ್ಮೀಪುರ, (2021), ವಿಚಾರವಾದಿ ಕುವೆಂಪು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.
4. ಚಕ್ಕರೆ ಶಿವಶಂಕರ್ (ಸಂ), (2004), ಸಹ್ಯಾದ್ರಿಯ ಸೂರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
5. ಶಿವರುದ್ರಪ್ಪ ಜಿ.ಎಸ್. (ಸಂ), (2003), ಶ್ರೀ ಕುವೆಂಪು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.